ಇ) ಇದರಲ್ಲಿ 155 ಫಲಾನುಭವಿಗಳು ಜಯಮಹಲ್ ವಿಧಾನ ಸಭಾ ಕ್ಷೇತ್ರಕ್ಕೆ ಸೇರಿದವರಾಗಿರುತ್ತಾರೆ.

ಈ) ಇಲ್ಲ. ನಿಗಮದ ಸ್ವಾವಲಂಬನಾ ಸಾಲದ ನೀತಿ ಮತ್ತು ನಿಯಮಾವಳಿ ಪ್ರಕಾರ ಫಲಾನುಭವಿಗಳು ಯಾರು ಅರ್ಜಿ ಸಲ್ಲಿಸಿರುವರೊ ಅಂತಹ ಫಲಾನುಭವಿಗಳಿಗೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಸಮಿತಿಯು ಪರಿಶೀಲಿಸಿ ಶಿಫಾರಸ್ಸಿನೊಂದಿಗೆ ಫಲಾನುಭವಿಗಳು ನಮೂದಿಸಿರುವ ಬ್ಯಾಂಕುಗಳಿಗೆ ಕಳುಹಿಸಲಾಗುತ್ತದೆ. ಈ ವಿಧಾನವು ಬೆಂಗಳೂರು ಜಿಲ್ಲೆಗೂ ಅನ್ವಯಿಸುತ್ತದೆ.

ಉ) ಸ್ವಾವಲಂಬನ ಸಾಲ ನೀತಿ ಮತ್ತು ನಿಯಮಾವಳಿ ಪ್ರಕಾರ ಮತೀಯ ಅಲ್ಪಸಂಖ್ಯಾತರ ಯಾರು ಸಾಲಕ್ಕಾಗಿ ಅರ್ಜಿ ಸಲ್ಲಿಸುವರೋ ಅಂತಹ ಎಲ್ಲಾ ಅರ್ಜಿಗಳನ್ನು ಮೇಲ್ಕಂಡ ಜಿಲ್ಲಾ ಸಮಿತಿಯು ಪರಿಗಣಿಸಿ ಯಾವುದೇ ಕ್ಷೇತ್ರದ ಭೇದವಿಲ್ಲದೆ ಸಾಲ ಸೌಲಭ್ಯದ ನೆರವನ್ನು ಕಲ್ಪಿಸಲು ತನ್ನ ಶಿಫಾರಸ್ಸಿನೊಂದಿಗೆ ಬ್ಯಾಂಕಿಗೆ ಕಳುಹಿಸಲಾಗುತ್ತದೆ.

ಹೊಸ ಉದ್ಯಮಿಗಳು ಬಂಡವಾಳ ತೊಡಗಿಸಿರುವ ಬಗ್ಗೆ

445. - ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಮುಖ್ಯ ಖನಿಜಗಳಾದ ಕಬ್ಬಿಣ ಮತ್ತು ಚಿನ್ನದ ಕ್ಷೇತ್ರಗಳಲ್ಲಿ ಹೊಸದಾಗಿ ಎಷ್ಟು ಉದ್ಯಮಿಗಳ ಬಂಡವಾಳ ತೊಡಗಿಸಿದ್ದಾರೆ?

ಆ) ಯಾವ ಯಾವ ಸ್ಥಳಗಳಲ್ಲಿ ಯಾವ ಯಾವ ಪರತ್ತುಗಳೊಂದಿಗೆ ಇವರು ಕಾರ್ಯೋನ್ಮುಖರಾಗಿದ್ದಾರೆ? ವಿವರ ನೀಡುವುದು.

ಎಸ್.ಡಿ. ಜಯರಾಂ (ಗಣಿ ಮತ್ತು ಭೂವಿಜ್ಞಾನ ಸಚಿವರು) :

ಅ) 17 ವ್ಯಕ್ತಿಗಳು : ಕಂಪನಿಗಳು ಹೊಸದಾಗಿ ಚಿನ್ನದ ಗಣಿ ಅನ್ವೇಷಣಾ ಲೈಸನ್ಸ್‌ಗಾಗಿ ಅರ್ಜಿ ಸಲ್ಲಿಸಿರುತ್ತಾರೆ. ಕಬ್ಬಿಣ ಅದಿರಿಗೆ ಸಂಬಂಧಿಸಿದಂತೆ 3 ಅರ್ಜಿಗಳು ಸ್ವೀಕೃತವಾಗಿವೆ.

ಆ) ಚಿನ್ನ ಹಾಗೂ ಕಬ್ಬಿಣದ ಅದಿರು ಹೆಚ್ಚಿರುವ ರಾಜ್ಯದ ಬಹುಪಾಲು ಪ್ರದೇಶಗಳು ಈ ಅರ್ಜಿಗಳಲ್ಲಿ ಒಳಗೊಂಡಿವೆ. ಈ ಎರಡೂ ಖನಿಜಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ನೀತಿಯನ್ನು ರೂಪಿಸುತ್ತಿದೆಯಲ್ಲದೆ ಸಂಬಂಧಿತ ನಿಯಮವಾದ ಖನಿಜ ರಿಯಾಯಿತಿ ನಿಯಮಗಳು 1960ರ ಕೆಲವು ಪ್ರಸ್ತುತ ನಿಯಮಗಳನ್ನು ಸಡಿಲಗೊಳಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರದ ತೀರ್ಮಾನಕ್ಕಾಗಿ ಕಾಯಲಾಗುತ್ತಿದೆ. ಆದ್ದರಿಂದ ಅರ್ಜಿದಾರರು ಗಣಿಗಾರಿಕೆ ಕೆಲಸವನ್ನು ಇನ್ನೂ ಪ್ರಾರಂಭಿಸಿರುವುದಿಲ್ಲ.

ಅಧ್ಯಕ್ಷರು : ದಿನಾಂಕ 20-2-96ರಂದು ಪ್ರಶ್ನೋತ್ತರ ನಡೆಯದ ಕಾರಣ 1ನೇ ಪಟ್ಟಿಯಲ್ಲಿದ್ದ 15 ಚುಕ್ಕೆ ಗುರುತಿನ ಪ್ರಶ್ನೆಗಳ ಪೈಕಿ 8 ಪ್ರಶ್ನೆಗಳಿಗೆ ಉತ್ತರಗಳನ್ನು 24 ಚುಕ್ಕೆ ರಹಿತ ಪ್ರಶ್ನೆಗಳ 11 ಪ್ರಶ್ನೆಗಳಿಗೆ ಉತ್ತರವನ್ನು ಸಭೆಯಲ್ಲಿ ಮಂಡಿಸುತ್ತೇನೆ.

ರಾಜ್ಯದಲ್ಲಿ ಕೈಗೊಂಡ ಏತ ನೀರಾವರಿ ಕಾಮಗಾರಿಗಳು

83 - ಶ್ರೀ ಜಿ.ಟಿ. ಪಾಟೀಲ್ (ಬೀಳಗಿ) :ಮಾನ್ಯ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?